ಸಾಕ್ಷಿಯನ್ನು ದಿಃ 14-07-2022 ರಂದು ಕರೆಸಿ ಪ್ರಮಾಣ ವಚನ ಬೋಧಿಸಿ ಪಾಟೀ ಸವಾಲಿಗೆ ಒಳಪಡಿಸಲಾಯಿತು.

**ಪಾಟಿ ಸವಾಲುಃ ಆರೋಪಿಯ ಪರಃ ಶ್ರೀ ವಿ.ಎನ್.ಎನ್. ವಕೀಲರಿಂದಃ**

ನಾನು ಸಾರಿಗೆ ವ್ಯವಹಾರ ಮತ್ತು ಕಾಮಗಾರಿ ಕೆಲಸ ಮಾಡುತ್ತೇನೆ. ಫಿರ್ಯಾದಿ ನನ್ನ ಹೆಂಡತಿ. ಅವರೂ ಸಹ ನನ್ನ ಜೊತೆ ವ್ಯವಹಾರ ಮಾಡುತ್ತಾರೆ. ಅವರು ಕೈಕಿಣಿ ರಸ್ತೆ ಕಾರವಾರದಲ್ಲಿ ಇರುತ್ತಾರೆ. ಅದು ನ್ಯಾಯಾಲಯದಿಂದ 1 ಕಿ.ಮೀ ದೂರ ಇದೆ ಅವರಿಗೆ ಖುದ್ದಾಗಿ ಬಂದು ಸಾಕ್ಷಿ ನುಡಿಯಲು ತೊಂದರೆ ಇಲ್ಲ. ನಿಪಿ.1 ಜಿ.ಪಿ.ಎ. ಎಲ್ಲಿ ತಯಾರಿಸಿದ್ದು ಈಗ ನೆನಪಿಲ್ಲ. ಜಿ.ಪಿ.ಎ. ಗೆ ನಾನು ಸಹಿ ಮಾಡಿಲ್ಲ. ಜಿ.ಪಿ.ಎ.ಗೆ ಜಿ.ಪಿ.ಎ.ದಾರರ ಸಹಿ ಇಲ್ಲದೇ ಇದ್ದ ಕಾರಣ ಅದಕ್ಕೆ ಮಾನ್ಯತೆ ಇಲ್ಲ ಎಂದರೆ ಸರಿಯಲ್ಲ. ಆ ಕಾರಣ ನನಗೆ ಸಾಕ್ಷಿ ನುಡಿಯಲು ಅಧಿಕಾರ ಇಲ್ಲ ಎಂದರೆ ಸರಿಯಲ್ಲ. ಫಿರ್ಯಾದಿಗೆ ಫಿರ್ಯಾದಿದಾರರು ಸಹಿ ಹಾಕಿಲ್ಲ ಎಂದರೆ ಸರಿ. ಫಿರ್ಯಾದಿ ಕೆಎ-30-6868 ಇದರ ಮಾಲೀಕರು ಎಂದು ತೋರಿಸಲು ಯಾವುದೇ ದಾಖಲೆ ಹಾಜರು ಮಾಡಿಲ್ಲ. ದಾಖಲೆ ಹಾಜರು ಮಾಡಲು ತೊಂದರೆ ಇಲ್ಲ. ವಾಹನ ಖರೀದಿಸುವ ಬಗ್ಗೆ ನನ್ನ ಕಚೇರಿಯಲ್ಲಿ ಮಾತುಕತೆಯಾಗಿತ್ತು. ಯಾವ ದಿನಾಂಕ ಮಾತುಕತೆಯಾಗಿತ್ತು ನೆನಪಿಲ್ಲ. ಮಾತುಕತೆ ಸಮಯದಲ್ಲಿ ನಾನು, ಆರೋಪಿ ಮತ್ತು ಫಿರ್ಯಾದಿ ಇದ್ದೆವು. ಎರಡೂ ಚೆಕ್ ನ್ನು ಒಂದೇ ದಿನ ಕೊಟ್ಟಿದ್ದರು, ಆದರೆ ದಿನಾಂಕ ಬೇರೆ ಬೇರೆ ಹಾಕಿ ಕೊಟ್ಟಿದ್ದರು. ಯಾವ ದಿನಾಂಕ ಹಾಕಿ ಕೊಟ್ಟಿದ್ದರು ನೆನಪಿಲ್ಲ. ನಿಪಿ.2 ಚೆಕ್ ನ್ನು ಎಕ್ಸಿಸ್ ಬ್ಯಾಂಕಿಗೆ ಸಲ್ಲಿಸಿದ್ದೆ ಯಾವ ದಿನಾಂಕ ಎಂದು ನೆನಪಿಲ್ಲ. ಎರಡು ಬಾರಿ ಬ್ಯಾಂಕಿಗೆ ಸಲ್ಲಿಸಿದ್ದೆನು. ಅದರ ಮೆಮೋ ಹಾಜರು ಮಾಡಿದ್ದೇನೆ. ನಿಪಿ.9 ಮತ್ತು 10 ತಯಾರಾದ ದಿನದಂದೇ ನಮಗೆ ಕೊಟ್ಟಿದ್ದರು. ಆ ದಾಖಲೆಗಳನ್ನು ದೂರು ಸಲ್ಲಿಸುವ ಸಮಯದಲ್ಲಿ ಹಾಜರು ಮಾಡಲು ತೊಂದರೆ ಇರಲಿಲ್ಲ. ನಿಪಿ.9 ಕ್ಕೆ ಯಾರು ಧೃಡೀಕರಣ ಮಾಡಿದ್ದಾರೆ ಅವರ ಸಹಿ ಇಲ್ಲ ಎಂದರೆ ಸರಿ. ನಿಪಿ.9 ಮತ್ತು 10 ನಾನೇ ಸೃಷ್ಟಿಸಿದ್ದೇನೆ ಎಂದರೆ ಸರಿಯಲ್ಲ. ನಿಪಿ.9 ರಂತೆ ಯಾವುದೇ ಕರಾರು ಪತ್ರ ಮಾಡಿಕೊಟ್ಟಿಲ್ಲ ಎಂದರೆ ಸರಿಯಲ್ಲ. ನಿಪಿ.10 ನ್ನು ನಾವೇ ಸೃಷ್ಟಿಸಿದ್ದು ಅದನ್ನು ಆರೋಪಿ ಮಾಡಿಕೊಟ್ಟಿಲ್ಲ ಎಂದರೆ ಸರಿಯಲ್ಲ. ಆರೋಪಿ ಮತ್ತು ಫಿರ್ಯಾದಿಯ ಮಧ್ಯ ವಾಹನ ಖರೀದಿಸುವ ಯಾವುದೇ ವ್ಯವಹಾರ ನಡೆದಿಲ್ಲ ಎಂದರೆ ಸರಿಯಲ್ಲ. ಆರೋಪಿ ನಿಪಿ.2 ಮತ್ತು 4 ರಂತೆ ಯಾವುದೇ ಚೆಕ್ ನ್ನು ಫಿರ್ಯಾದಿಗೆ ಕೊಟ್ಟಿಲ್ಲ ಎಂದರೆ ಸರಿಯಲ್ಲ.

ನಿಪಿ.2 ಮತ್ತು 4 ಚೆಕ್ ಆರೋಪಿಯ ಖಾತೆಗೆ ಸಂಬಂಧಪಟ್ಟಿದ್ದಲ್ಲ ಎಂದರೆ ಸರಿಯಲ್ಲ. ನಾನು ಬೇರೆ ಯಾರದ್ದೋ ಚೆಕ್ ನ್ನು ಪಡೆದು ಆರೋಪಿಯ ವಿರುದ್ಧ ಸುಳ್ಳು ದೂರು ಸಲ್ಲಿಸಿದ್ದೇನೆ ಎಂರದೆ ಸರಿಯಲ್ಲ. ಫಿರ್ಯಾದಿಯ ಸಾಕ್ಷಿ ಮಾಡಿಸಲು ತೊಂದರೆ ಇಲ್ಲ.ಸದ್ರಿ ವಾಹ ಆರೋಪಿಯ  ಹೆಸರಿಗೆ ಯಾವತ್ತೂ ಬಂದಿಲ್ಲ ಎಂದು ನನಗೆ ಗೊತ್ತಿಲ್ಲ. ಆರೋಪಿಯ ವಿರುದ್ಧ ಸುಳ್ಳು ದೂರು ದಾಖಲಿಸಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸರಿ ಇದೆ

Sd/-

ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು,

ಕಾರವಾರ.